ಅಸಲ ದಾವಾ ನಂ.**205/2023**
ಡಿ.ಡಬ್ಲೂ:**01**

ದಿನಾಂಕ**: 16-04-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ.RVG ವಕೀಲರಿಂದ**

1. ದಾವಾ ಅನುಸೂಚಿ ಸ್ವತ್ತುಗಳ ಕಬ್ಜೆಯನ್ನು ಕೊಡಿಸಲು ವಾದಿಯರು ನಮ್ಮ ಮೇಲೆ ಪ್ರಕರಣವನ್ನು ಮಾಡಿರುತ್ತಾರೆ. ಸದರಿ ಜಮೀನಿನ ಸರ್ವೆ ನಂ.311/2 ರಂತೆ ಇರುತ್ತದೆ. ಸದರಿ ಜಮೀನಿನ ವಿಸ್ತೀರ್ಣ 03 ಎಕರೆ 11 ಗುಂಟೆ ಇರುತ್ತದೆ. ದಿನಾಂಕಃ 04-07-1984 ಕ್ಕಿಂತ ಪೂರ್ವದಲ್ಲಿ ಜಮೀನಿನ ವಿಸ್ತೀರ್ಣ 09 ಎಕರೆ 22 ಗುಂಟೆ ಜಮೀನು ಇತ್ತು. ದಿನಾಂಕಃ 04-07-1984 ರಂದು ಸದರಿ ಜಮೀನಿನಲ್ಲಿ ವಾಟ್ನಿಯಾಗಿರುತ್ತದೆ. ವಾಟ್ನಿಯಾಗುವ ಸಮಯದಲ್ಲಿ ನನ್ನ ಗಂಡ ಜೀವಂತ ಇದ್ದರು. ದಿನಾಂಕಃ 04-07-1984 ರಂದು ನನ್ನ ಗಂಡನ ಕಬ್ಜಾಕ್ಕೆ 03 ಎಕರೆ 11 ಗುಂಟೆ ಜಮೀನು ಬಂದ ನಂತರ ನನ್ನ ಗಂಡ ಯಾವತ್ತೂ ಆ ಜಮೀನಿನಲ್ಲಿ ಕಬ್ಜೆಯನ್ನು ಪಡೆದುಕೊಂಡು ವಹಿವಾಟು ಉಪಭೋಗ ಮಾಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನನ್ನ ಗಂಡ ತೀರಿಕೊಂಡ ನಂತರ ನಾನು ಆಗಲಿ, ನನ್ನ ಪರವಾಗಿ ಯಾರೂ ಸಹ ಮೇಲ್ಕಾಣಿಸಿದಂತಹ 03 ಎಕರೆ 11 ಗುಂಟೆ ಜಮೀನಿನಲ್ಲಿ ಕಬ್ಜೆಯನ್ನು ಹೊಂದಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. 1984 ರಲ್ಲಿ ಸದರಿ ಜಮೀನಿನಲ್ಲಿ ವಾಟ್ನಿಯಾದ ನಂತರ ಫೋಡಿ ಆಗಿರುವುದಿಲ್ಲ ಎಂದು ಸೂಚಿಸುವುದು

ಸರಿಯಲ್ಲ.

2. ಸದರಿ ಉತಾರೆಯಲ್ಲಿ ಮಲ್ಲಪ್ಪ, ಸಂಗಪ್ಪ ಹಾಗೂ ನಾನು ವಿಜಯಲಕ್ಷ್ಮೀ ಇವರುಗಳ ಹೆಸರುಗಳು ಉತಾರೆಯಲ್ಲಿ ದಾಖಲಾರುತ್ತವೆ. ನಮ್ಮ ಎಲ್ಲರ ಹೆಸರುಗಳು ಉತಾರೆಯಲ್ಲಿ ಪ್ರತ್ಯೇಕವಾಗಿ ನಮೂದು ಆಗಿರುತ್ತವೆ. ಕಳೆದ ಮೂರು ವರ್ಷಗಳ ಹಿಂದೆ ಉಪವಿಭಾಗಾಧಿಕಾರಿಗಳು, ವಿಜಯಪುರ ಇವರ ಮುಂದೆ ನಾನು ಒಂದು ಅರ್ಜಿಯನ್ನು ಸಲ್ಲಿಸಿದ್ದೆನು ಎಂದರೆ ನಿಜ. ಎ.ಸಿ.ಯವರು ತಹಶೀಲದಾರ ಇವರಿಗೆ ಒಂದು ಆದೇಶವನ್ನು ಮಾಡಿ ಕಬ್ಜೆಯನ್ನು ಕೊಡಿಸಲು ಹೇಳಿರುತ್ತಾರೆ ಎಂದರೆ ನಿಜ. ತಹಶೀಲದಾರ ಇವರು ಪಿಎಸ್ಐ ಹಾಗೂ ಸಿಪಿಐ ಇವರಿಗೆ ಕಬ್ಜೆಯನ್ನು ಕೊಡಿಸಲು ಹೇಳಿರುತ್ತಾರೆ ಎಂದರೆ ನಿಜ. ನನ್ನ ಪ್ರಕಾರ, ಒಂದು ವೇಳೆ ನಾವೇ ಕಬ್ಜೆಯಲ್ಲಿ ಇದ್ದರೆ ಎ.ಸಿ. ಯವರ ಮುಂದೆ ಯಾವುದೇ ಅರ್ಜಿ ಸಲ್ಲಿಸುವ ಪ್ರಸಂಗ ಉದ್ಭವಿಸುತ್ತಿರಲಿಲ್ಲ ಎನ್ನುವ ಪ್ರಶ್ನೆಗೆ ಈ ಮದ್ಯದ ಅವಧಿಯಲ್ಲಿ ನಾವುಗಳು ಊರಿನಲ್ಲಿ ಇರದೇ ಮೈಸೂರಿಗೆ ಹೋದಂತಹ ಸಂದರ್ಭದಲ್ಲಿ ಪ್ರತಿವಾದಿಯರು ನಮ್ಮ ಕಬ್ಜೆ ವಹಿವಾಟನ್ನು ತಪ್ಪಿಸಿರುತ್ತಾರೆ ಹಾಗೂ ನಮ್ಮ ಜಮೀನಿನಲ್ಲಿ ನಷ್ಟವನ್ನು ಉಂಟು ಮಾಡಿರುತ್ತಾರೆ. 1984 ರಲ್ಲಿ ವಾಟ್ನಿಯಾದ ನಂತರ ನನ್ನ ಗಂಡ ಸಂಗಪ್ಪ ಜೀವಂತ ಇರುವಂತಹ ಸಂದರ್ಭದಲ್ಲಿ ಆಗಲಿ, ಆತನು ಮರಣಹೊಂದಿದ ನಂತರ ಆತನ ವಾರಸುದಾರರಾದಂತಹ

ಅಸಲ ದಾವಾ ನಂ.**205/2023**
ಡಿ.ಡಬ್ಲ್ಯೂ:**01**

ನಾವುಗಳು ಯಾವಾಗಲೂ ಕಬ್ಜೆ ವಹಿವಾಟಿನಲ್ಲಿ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. 1984 ರಿಂದಲೂ ಇಲ್ಲಿಯವರೆಗೂ ವಾದಿಯರೇ ದಾವಾ ಅನುಸೂಚಿ ಜಮೀನಿನಲ್ಲಿ ಕಬ್ಜೆಯನ್ನು ಹೊಂದಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ

ಪ್ರಧಾನ ಹಿರಿಯ ಸಿವ್ಹಿಲ್ ವ ಜೆ.ಎಮ್.ಎಫ್.ಸಿ., ನ್ಯಾಯಾಧೀಶರು,
ಬಸವನ ಬಾಗೇವಾಡಿ.